ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-5, March - April 2026, Pp. 1-8
©*IIMRD*, Mysuru
www.iimrd.com

# ಭವ್ಯಮಾನವಳಾಗಿ ಅಕ್ಕಮಹಾದೇವಿ

**ಅರುಣ ಸಿ. ಕೆ[1] ಮತ್ತು ಪ್ರೊ. ಡಿ. ವಿಜಯಲಕ್ಷ್ಮಿ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**ಸಾರಾಂಶ: (Abstract)**

*ಕವಿ ತನ್ನ ಕಾಲಮಾನದ ಜೀವನಧರ್ಮವನ್ನು ಹಿಡಿಯಾಗಿ ನಿರೂಪಿಸುವ ಸಲುವಾಗಿ ಮಹಾಕಾವ್ಯ ರಚನೆಗೆ ತೊಡಗಿಕೊಳ್ಳುತ್ತಾನೆ. ಪಂಪ, ರನ್ನ, ಜನ್ನರಂತಹ ಮಹಾಕವಿಗಳು ಸುಧೀರ್ಘವಾದ ಕಥೆಯೊಂದನ್ನು ಹೇಳಲು ಹೊರಟಿದ್ದು ಕೇವಲ ನಾಯಕ ಪ್ರಧಾನವಾಗದೆ, ಕವಿಯ ಜೀವನವು ಕಂಡಂತಹ ಸಾಂಸ್ಕೃತಿಕ, ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಸ್ತರಗಳ ಅಭಿವ್ಯಕ್ತಿಯಾಗಿರುತ್ತದೆ. ಜೀವನದ ನಿಜದರ್ಶನದ ಹುಡುಕಾಟಕ್ಕಾಗಿ ಮಹಾಕಾವ್ಯ ರಚಿಸುವುದರಿಂದ ಕವಿ 'ಮಹಾಕವಿ' ಎನಿಸಿಕೊಳ್ಳುತ್ತಾನೆ. ಕನ್ನಡದಲ್ಲಿ ಮಹಾಕಾವ್ಯದ ಪರಂಪರೆಯು ರಾಜಕೀಯವಾಗಿ ಪ್ರಭುತ್ವವನ್ನು, ಧಾರ್ಮಿಕವಾಗಿ ಕಾವ್ಯ ಧರ್ಮವನ್ನು, ಸಾಂಸ್ಕೃತಿಕವಾಗಿ ಧರ್ಮವನ್ನು ಅನುಸಂಧಾನಗೊಳಿಸುತ್ತಾ ಸಾಗಿಬಂದಿದೆ.*

**ಮುಖ್ಯಪದಗಳು (Keywords):** *ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ಅಕ್ಕಮಹಾದೇವಿ.*

## ಪೀಠಿಕೆ

ಸುದೀರ್ಘವಾದ ಕಥನದ ಮೂಲಕ ಕವಿ ಸೃಜಿಸುವ ಸನ್ನಿವೇಶಗಳು, ಪಾತ್ರಗಳು, ವಿಚಾರಧಾರೆ ಮತ್ತು ಸಂಭಾಷಣೆಗಳು ಕೃತಿಯು ಒಡಮೂಡಿಸುವ ದರ್ಶನಗಳ ಆಧಾರಗಳ ಮೇಲೆ ಕಟ್ಟಲ್ಪಡುತ್ತವೆ. "ಮಹಾಕಾವ್ಯದ ಸಮಗ್ರತೆ ಅನೇಕ ಅಂಶಗಳ ಒಟ್ಟು ಪರಿಣಾಮವಾಗಿ ಫಲಿಸುತ್ತವೆ. ಕಥಾವಸ್ತು, ನಾಯಕ ಪಾತ್ರ, ಭಾಷೆ, ಶೈಲಿ ಮತ್ತು ದರ್ಶನ ಇವೆಲ್ಲ ಅಂಶಗಳೂ ಮಹಾಕಾವ್ಯದ ಸಮಗ್ರತೆಯನ್ನು ಒದಗಿಸುವಲ್ಲಿ ಒಟ್ಟಾಗಿ ದುಡಿಯುತ್ತವೆ."[1]

ಹಳೆಗನ್ನಡ ಕಾಲಘಟ್ಟದ ಮಹಾಕಾವ್ಯಗಳು ಪೌರಾಣಿಕ ಹಿನ್ನೆಲೆಯ ಅಥವಾ ಮಹಾಭಾರತ, ರಾಮಾಯಣದ ಕಥಾಹಂದರ ಪಾತ್ರಗಳನ್ನು ನಾಯಕನನ್ನಾಗಿ ಆಯ್ಕೆ ಮಾಡಿಕೊಂಡು, ಪ್ರಭುತ್ವದೊಂದಿಗೆ ಸಮೀಕರಿಸಿ ನಿರೂಪಿತಗೊಳ್ಳುತ್ತಿದ್ದವು. ಆದರೆ ಆಧುನಿಕ ಮಹಾಕಾವ್ಯ ಪರಂಪರೆಯು ಈ ಸೀಮಿತವಾದ ಪೌರಾಣಿಕ ನೆಲೆಯನ್ನು ಬದಿಗೆಸರಿಸಿ ನೆಲದ ಸಾಧಕರ ಯಶೋಗಾಥೆಯನ್ನು ಹಾಡಲು, ಹಾಡಿ

---

1. ಹೊಸಗನ್ನಡ ಸಾಹಿತ್ಯದಲ್ಲಿ ಅಕ್ಕಮಹಾದೇವಿ : ಡಾ. ಕಮಲಾ ಹಿಂದೂಧರ ಸಿನ್ನೂರ್, ಪುಟ–154

*Please cite this article as:* ಅರುಣ ಸಿ. ಕೆ. ಮತ್ತು ಡಿ. ವಿಜಯಲಕ್ಷ್ಮಿ (2026). ಭವ್ಯಮಾನವಳಾಗಿ : ಅಕ್ಕಮಹಾದೇವಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(5). ಪು.ಸಂ.* 1–8

ಜನಪ್ರಿಯಗೊಳಿಸುವ ಈ ಪ್ರಕಾರವನ್ನು ದುಡಿಸಿಕೊಂಡಿದೆ. ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ'ನಿಂದ ನಾಂದಿಗೊಂಡ ಮಹಾಕಾವ್ಯ ಪರಂಪರೆಯು ಭೂಸನೂರಮಠ ಅವರ 'ಭವ್ಯಮಾನವ'ದ ಮೂಲಕ ಪ್ರಬಲವಾಗಿ ಮುಂದುವರೆದಿದೆ. ಅಕ್ಕನೆಂಬ ಘನವ್ಯಕ್ತಿತ್ವವನ್ನು 'ಮಹಾಮಾನವ'ತೆಯ ದ್ಯೋತಕವಾಗಿ ಭೂಸನೂರಮಠರು ನಿರೂಪಿಸಿದ್ದಾರೆ. "ಈ ಕಾವ್ಯದ ಭವ್ಯಮಾನವ ಕಲ್ಪನೆಗೆ ಅದ್ಭುತವಾದದು. ಕವಿ ಕೊಟ್ಟ ಭವ್ಯಮಾನವದ ಅರ್ಥ ಭವಿಷ್ಯ ಮಾನವ ಎಂದು, ಭವ್ಯಮಾನವ ಅಥವಾ ಇಂಗ್ಲಿಷ್‌ನ 'ಸೂಪರ್‌ಮ್ಯಾನ್' ಎಂದಲ್ಲ, ಮನುಕುಲಕ್ಕಾಗಿ ಮೀಸಲಿರುವ (ದಿ ಗ್ರ್ಯಾಂಡ್ ಫ್ಯೂಚರ್) ಅಂದರೆ ಪರಮಭವ್ಯಕ್ಕೆ ಭೂತ ಮತ್ತು ವರ್ತಮಾನಗಳು ಯಾವ ಭವಿಷ್ಯದ ಕಡೆಗೆ ನಡೆದಿವೆ, ನಡೆಯಬೇಕು ಎಂಬ ಸೂಚನೆ"[2] ಭವ್ಯಮಾನವ ಎಂಬುದೇ ಮಾನವತೆಯ ಅಡಿಗಲ್ಲು ಎಂಬುದು ಸಾ.ಶಿ. ಮರುಳಯ್ಯನವರ ಅಭಿಪ್ರಾಯವಾಗಿದೆ.

ಭೂಸನೂರಮಠ ಅವರ ಕಾವ್ಯದೃಷ್ಟಿಯಲ್ಲಿ ಇತಿಹಾಸವನ್ನು ಇತಿಹಾಸವಾಗಿಯಷ್ಟೇ ನೋಡುವ ಹಳತಾದ ಕ್ರಮವಿಲ್ಲ. ಇತಿಹಾಸದ ಅವಶೇಷಗಳಿಂದ ಹೊಸಮಾನವನನ್ನು ಅಥವಾ ನವಮಾನವತತ್ವವನ್ನು ಹುಡುಕಿ ತರುವ ಪ್ರಯತ್ನದಲ್ಲಿ ಭೂಸನೂರರು ಸೃಜನಶೀಲತೆಯನ್ನು ತೋರಿದ್ದಾರೆ. ಭವ್ಯಮಾನವ ಕೃತಿಯ ಮೂಲ ಪ್ರೇರಕ ಶಕ್ತಿಯಾಗಿ ಅಕ್ಕ ಜೀವನಚರಿತೆ ನಿಮಿತ್ತವಾಗಿದ್ದರೆ, ಮಾನವನನ್ನು ದಿವ್ಯವಾದ ಆದರ್ಶ ಮತ್ತು ಸಂಸ್ಕೃತಿಯತ್ತ ಕರೆದೊಯ್ಯುವ ಮಾನವೀಯ ನೆಲೆ ಕೂಡ ಕಾವ್ಯದ ಮುಖ್ಯ ಜೀವಾಳವಾಗಿದೆ. 'ಭವ್ಯಮಾನವ' ಎನ್ನುವ ಶೀರ್ಷಿಕೆಯನ್ನು ಮರುನಿರ್ವಚನಕ್ಕೆ ಒಳಗಾಗಿಸುವ ಸಂಕೀರ್ಣ ಪರಿಸ್ಥಿತಿ ಇವತ್ತಿನ ಸವಾಲಾಗಿದೆ. ಏಕೆಂದರೆ 'ಮಾನವ' ಎನ್ನುವ ಪದವೇ ಪುಲ್ಲಿಂಗಸೂಚಕವಾಗಿ ಸೀಮಿತಾರ್ಥಕ್ಕೆ ಒಳಗಾಗಿದೆ. ಮಾನವ ಎನ್ನುವ ಶಬ್ದ ಮೇಲ್ನೋಟಕ್ಕೆ ಸ್ತ್ರೀ–ಪುರುಷರಿಬ್ಬರನ್ನು ಒಟ್ಟುಗೂಡಿಸಿಕೊಂಡು ಒಂದೇ ಅರ್ಥದಲ್ಲಿ ಬಳಸಲ್ಪಡುತ್ತಿದ್ದರು, ಪುರುಷ ಪಂಕ್ತಿಯ ಸಂಕೇತವಾಗಿ ಗುರುತಿಸಲ್ಪಡುತ್ತಿದೆ. ಹಾಗಾಗಿ ಅಕ್ಕನ ಜೀವನ ಚರಿತ್ರೆಯನ್ನು ಕಾವ್ಯದ ಪ್ರಧಾನ ನಾಯಕಿಯಾಗಿ ಚಿತ್ರಿಸಿರುವುದು ಗಮನಾರ್ಹಸಂಗತಿ. ಅಕ್ಕನನ್ನು ನಿಮಿತ್ತವಾಗಿಸಿಕೊಂಡು ಕಲ್ಯಾಣದ ಮಹತ್ವವನ್ನು ಮಾನವತೆಯ ಶಿರೋಮಣಿಯಾಗಿ ನಿರೂಪಿಸಿದ್ದಾರೆ. ಕಾಯ, ಕಾಮ ಮತ್ತು ಮನೋವಿಕಾರಗಳನ್ನು ಸದ್ಭಕ್ತಿ, ಸುಜ್ಞಾನ ಮತ್ತು ವೈರಾಗ್ಯದಿಂದ ತೊಡೆದು ಮಾನವತೆಗೆ ಭವ್ಯತೆಯನ್ನು ದೊರಕಿಸಿದ್ದಾರೆ. ಮಹಾದೇವಿಯಕ್ಕನ ಜನನ, ಬಾಲ್ಯ, ಯೌವ್ವನಗಳ ಬಗೆಗೆ ಸರಳವಾದ ವರ್ಣನೆಗಳಿರುವ 'ಕಲ್ಯಾಣಕಾಂಡ'ದ ಭಾಗವು ಅಕ್ಕನ ವ್ಯಕ್ತಿತ್ವದ ವೈಭವೀಕರಣಕ್ಕೆ ಒಳಗಾಗಿಸದೆ ಚಾರಿತ್ರಿಕ ಸತ್ಯದ ಅಂಗವಾಗಿ ನಿರೂಪಿತವಾಗಿದೆ. ಅಕ್ಕನ ಗೆಳತಿ 'ಚಂಪೆ'ಯ ಪಾತ್ರ ಭೂಸನೂರರ ಅನನ್ಯತೆಯ ಪ್ರತೀಕವಾಗಿ ಚಿತ್ರಿಸಲ್ಪಟ್ಟಿರುವುದು ವಿಶೇಷ.

ಶೂನ್ಯಸಂಪಾದನೆಗಳ ಪರಾಮರ್ಶೆಗೆ ತೊಡಗಿಕೊಂಡ ಭೂಸನೂರರು ವಚನ ಚಳುವಳಿಯನ್ನು ಸಾಹಿತ್ಯ ಪ್ರಕಾರವಾಗಿ ಮಾತ್ರ ಪರಿಗಣಿಸದೆ, ತಾತ್ವಿಕ ಚಿಂತನೆಯಾಗಿ ನಿರ್ವಹಿಸಿದ ಪರಿಣಾಮವಾಗಿ ಭವ್ಯಮಾನವದಂತಹ ಮಹಾಕಾವ್ಯ ರಚಿಸಲು ಸಾಧ್ಯವಾಗಿದೆ. ಜನಸಾಮಾನ್ಯರ ಬಾಲ್ಯದಂತೆಯೇ ಅಕ್ಕನ ಬಾಲ್ಯವನ್ನು ಕಟ್ಟಿಕೊಟ್ಟಿರುವ ಭೂಸನೂರರು 'ಚಂಪೆ' ಎಂಬ ಗೆಳತಿ ಹುಡುಗಾಟಿಕೆಯಿಂದ

2. ಭವ್ಯಮಾನವ–ಕಾವ್ಯದರ್ಶನ : ಡಾ. ಗುರುಲಿಂಗ ಕಾಮಸೆ, ಡಾ. ಎಸ್. ಜಿ. ಘಿವಾರಿ, ಪ್ರಾ. ಅಣ್ಣಪ್ಪ ಮಟ್ಟೀಕಲ್ಲಿ (ಸಂ) ಪುಟ–165

'ಮಲ್ಲಿಕಾರ್ಜುನನೇ' ವರವೆಂದು ಚೇಷ್ಟೆಗಾಗಿ ನುಡಿದ ಪ್ರಸಂಗವನ್ನು ಸೃಜನಶೀಲತೆಯಿಂದ ಅಭಿವ್ಯಕ್ತಿಸಿದ್ದಾರೆ. ತಮಾಷೆಗಾಗಿ ಗೆಳತಿಯಿಂದ ಮಲ್ಲಿಕಾರ್ಜುನನ ವಧುವಾದ ಅಕ್ಕನು ತನ್ನ ಮನೋಲೋಕದಲ್ಲಿ ಚೆನ್ನಮಲ್ಲಿಕಾರ್ಜುನನನ್ನು ಒಡಮೂಡಿಸಿಕೊಂಡು ಅಂತರಂಗದಲ್ಲಿ ನಿಜ ವಧುವಾಗಿ ಬೆಳಗುವ ಚಿತ್ರಣ ಹೃದಯಸ್ಪರ್ಶತೆಯಿಂದ ನಿರೂಪಿತಗೊಂಡಿದೆ. ಭೂಸನೂರರು ಅಕ್ಕನ ವ್ಯಕ್ತಿತ್ವದ ನಿರೂಪಣೆಗೆ ಸಿಂಹಾವಲೋಕನ ಕ್ರಮ ವಹಿಸಿರುವುದು ಗಮನಾರ್ಹ. ತಾನು ಚೆನ್ನನಿಗಾಗಿ ಪರಿತಪಿಸಿ ವರಿಸಿ ಬಂದಂತಹ ಹಾದಿಯನ್ನು ಶರಣರ ಮುಂದೆ ತಿಳಿಸುವ ಸಿಂಹಾವಲೋಕನ ಕ್ರಮ ಮಹಾಕವಿಯ ವೈಶಿಷ್ಟ್ಯತೆಗೆ ಸಾಕ್ಷಿಯಾಗಿದೆ. ಅಕ್ಕನು ತನ್ನನ್ನು ಮೋಹಿಸಿ ಕಾಮದಾಸೆಯಿಂದ ಭೋಗಿಸಲು ಇಚ್ಛಿಸಿದ ಕೌಶಿಕನನ್ನು ಮದುವೆಯಾಗದೆಯೇ ತಿರಸ್ಕರಿಸಿ ಲೌಕಿಕತೆಯ ವಸ್ತ್ರವನ್ನು ತ್ಯಜಿಸಿ ಹೊರ ನಡೆಯುವ ದೃಶ್ಯ ಭೂಸನೂರರ ಸಮಗ್ರ ದೃಷ್ಟಿಕೋನದ ಪ್ರತಿರೂಪವಾಗಿ ಮೇಳೈಸಿದೆ. 'ಭವ್ಯಮಾನವ' ಮಹಾಕಾವ್ಯದ ಕೆಲವು ವೈಶಿಷ್ಟ್ಯತೆಗಳನ್ನು ಗುರುತಿಸಿಕೊಳ್ಳುವ ಮೂಲಕ ಭೂಸನೂರಮಠರು ಚಿತ್ರಿಸಿರುವ ಅಕ್ಕನ ವ್ಯಕ್ತಿತ್ವವನ್ನು ಸಮಕಾಲೀನ ಕಣ್ಣೋಟಗಳಿಂದ ಗ್ರಹಿಸಬಹುದು.

ಅಕ್ಕಮಹಾದೇವಿ ಮತ್ತು ಗೆಳತಿ ಚಂಪೆಯ ಒಡನಾಟ ಬಹುಮುಖ್ಯ ವಿಚಾರಧಾರೆಯಾಗಿ ನಿರ್ಮಾಣಗೊಂಡಿದೆ. ಅಕ್ಕಮಹಾದೇವಿಯ ವಚನಗಳಲ್ಲಾಗಲಿ, ಹರಿಹರ ಮತ್ತು ಚಾಮರಸನಾದಿಯಾದ ಯಾವ ಕವಿಗಳಲ್ಲೂ ಕಾಣಿಸಿಕೊಳ್ಳದ 'ಚಂಪೆ'ಯ ಪಾತ್ರವು ಭೂಸನೂರರ ಮಹಾಕಾವ್ಯದಲ್ಲಿ ಚಿತ್ರಿಸಲ್ಪಟ್ಟಿರುವುದು ವಿಶೇಷವಾದದ್ದು. 'ಚಂಪೆ'ಯ ಪಾತ್ರದ ರಚನೆಯ ಹಿಂದೆ ಮಹೋನ್ನತವಾದ ಉದ್ದೇಶವಿಲ್ಲದಿದ್ದರೂ ಸಮಕಾಲೀನ ದೃಷ್ಟಿಕೋನದ ಅನಿವಾರ್ಯತೆಯಂತೂ ಭೂಸನೂರರಿಗೆ ಎದುರಾದಂತಿದೆ. ಅಂದರೆ ಜನಸಾಮಾನ್ಯರ ಬಾಲ್ಯದಂತೆಯೇ ಅಕ್ಕನ ಬಾಲ್ಯವು ಕೂಡ ಲೌಕಿಕತೆಯ ನೆರಳಿನಾಶ್ರಯದಲ್ಲಿಯೇ ಘಟಿಸಿದೆ ಎಂಬ ಸತ್ಯದ ನಿರೂಪಣೆಗೆ 'ಚಂಪೆ'ಯ ಪಾತ್ರವನ್ನು ಕವಿ ಬಳಸಿಕೊಂಡಿದ್ದಾರೆ. ಸಾಮಾನ್ಯವಾಗಿ ಪ್ರತಿಯೊಬ್ಬರ ಬಾಲ್ಯವು 'ಮದುವೆಯಾಟದ' ತುಂಟಾಟದ ಪ್ರಸಂಗವನ್ನು ದಾಟಿಯೇ ಮುಂದುವರೆದಿರುತ್ತದೆಯೆಂಬ ಸಾಮಾನ್ಯ ಸಂಗತಿಯನ್ನೇ ಭೂಸನೂರರು ಮಹತ್ವದ ಘಟನೆಯಾಗಿ ಸ್ವೀಕರಿಸಿದ್ದಾರೆ. 'ಚಂಪೆ'ಯು ಚೆನ್ನಮಲ್ಲಿಕಾರ್ಜುನನಿಗೆ ವಧುವಾಗಿ ಅಕ್ಕನನ್ನು ಆಯ್ಕೆಮಾಡಿಕೊಳ್ಳುವ ಉದ್ದೇಶದಲ್ಲಿ ನೆಲಮೂಲ ದೈವಗಳು ಮನುಷ್ಯನಿಗೆ ಹತ್ತಿರವಿರುತ್ತವೆಂಬ ಶೂದ್ರ ಸಂಸ್ಕೃತಿ ತಿಳುವಳಿಗೆ ಇದ್ದಂತಿದೆ. ಅಕ್ಕಮಹಾದೇವಿಯು ಬಾಲ್ಯದಲ್ಲಿರುವಾಗಲೇ ಚೆನ್ನಮಲ್ಲಿಕಾರ್ಜುನನ ಮಹಿಮೆಯು ನಾಡಿನಾದ್ಯಂತ ಪಸರಿಸರಬಹುದು. ಈ ಮಹಿಮೆಯ ಪರಿಣಾಮವಾಗಿ ಗೆಳತಿ 'ಚಂಪೆ' ಚೆನ್ನಮಲ್ಲಿಕಾರ್ಜುನನ ನಲ್ಲೆಯ ಪಾತ್ರವನ್ನು ಅಕ್ಕನಿಗೆ ಕೊಟ್ಟು ಎಳೆಹೃದಯದಲ್ಲಿ ಘನಭಕ್ತಿಯೊಂದನ್ನು ಬಿತ್ತಿದ್ದಾಳೆ.

ಅಕ್ಕನನ್ನು ಮಹಾಕಾವ್ಯದ ನಾಯಕಿಯನ್ನಾಗಿ ಮಾಡಿಕೊಳ್ಳುವ ಮಹತ್ವದ ಉದ್ದೇಶಕ್ಕೆ ಪೂರಕವಾಗಿ ಚಂಪೆಯ ಪಾತ್ರ ಚಿತ್ರಿತವಾಗಿದೆ. ಚಂಪೆ ಮತ್ತು ಅಕ್ಕನ ಗೆಳೆತನ ಬಾಲ್ಯದಿಂದ ಯೌವ್ವನದವರೆಗೂ ಮುಂದುವರೆದಿದೆ. ಈ ನಡುವೆ ಉಡುತಡಿಯಲ್ಲಿ ವ್ಯಾಪಿಸಿದಂತಹ ಶಿವಸಂಸ್ಕೃತಿಯ ಶೈವ ಪರಿಸರವು ಅಕ್ಕನ ಮನೋಭಿಲಾಷೆಯ ಚೆನ್ನನ ಆಕೃತಿಯನ್ನು ಶಿಖರೋಪಾದಿಯಲ್ಲಿ ಕಡೆದು ನಿಲ್ಲಿಸಿದೆ. ಹಾಗಾಗಿಯೇ ನೀರು

ತರುವಾಗ ಗೆಳತಿ ಚಂಪೆ 'ನಾನೇ ನಿನ್ನ ಚೆನ್ನ'ನೆಂದು ಅಕ್ಕನಿಗೆ ಮುತ್ತಿಡುವ ಸನ್ನಿವೇಶ ತಾರುಣ್ಯದ ಚೇಷ್ಟೆಯಾಗಿರದೆ ಅಕ್ಕನಲ್ಲಿ ಚೆನ್ನನ ಮೇಲಿದ್ದ ಅಗಾಧವಾದ ಒಲವಿನ ಪ್ರತೀಕವಾಗಿದೆ. ಆದ್ದರಿಂದ ಲೌಕಿಕಳಾದ ಚಂಪೆಯ ಮುತ್ತನ್ನು ಅಕ್ಕ 'ಎಂಜಲೆಂದು' ಭಾವಿಸಿ ತಾನು ಚೆನ್ನಮಲ್ಲಿಕಾರ್ಜುನನಿಗೆ ಮೀಸಲೆಂದು ಪರಿತಪಿಸುತ್ತಾಳೆ. ತನ್ನ ದೇಹ ಮತ್ತು ಮನಸ್ಸುಗಳನ್ನು ತನ್ನ ಆರಾಧ್ಯ ದೈವಕ್ಕೆ ಮೀಸಲಾಗಿರಿಸಿದಂತಹ ಅಕ್ಕನಿಗೆ ಗೆಳತಿಯ ಮುತ್ತು ಸರೀಕಳ ಸಲುಗೆಯಾಗಿರದೆ ಲೌಕಿಕತೆಯ ಆಮಿಷವಾಗಿ ಕಂಡಿದೆ. ಅದಕ್ಕೂ ಮಿಗಿಲಾಗಿ ಚೆನ್ನಮಲ್ಲಿಕಾರ್ಜುನನಿಗಾಗಿ ಕಾದಿರಿಸಿರುವ ಹಾಗೂ ಕಾಪಾಡಿಕೊಂಡಿರುವ ಪರಿಶುದ್ಧ ಒಲವಿಗೆ ಸ್ವತಃ ಗೆಳತಿಯಿಂದಲೂ ಅಡಚಣೆಯಾಗುತ್ತದೆಯೆಂದಾಗ ಅಕ್ಕ ಮರುಗಿರುವುದು ಗಮನಾರ್ಹ. ಭೂಸನೂರಮಠರು 'ಚಂಪೆ'ಯ ಪಾತ್ರವನ್ನು ಸೃಷ್ಟಿಸುವ ಮೂಲಕ ಅಕ್ಕಮಹಾದೇವಿಯ ಬಾಲ್ಯ ಮತ್ತು ಯೌವ್ವನದ ದಿನಗಳಲ್ಲಿಯೇ ಚಿಗುರೊಡೆದ ದೈವೀ ಅನುಭವದ ಗಾಢತೆಯನ್ನು ಅಭಿವ್ಯಕ್ತಿಸಿದ್ದಾರೆ. "ಹನ್ನೆರಡನೆಯ ಶತಮಾನದ ವೀರವೀರಾಗಿಣಿ, ಸ್ವತಂತ್ರ ಧೀರ ಮಹಿಳಾಮಣಿ, ಅಕ್ಕಮಹಾದೇವಿಯ ಜೀವನದ ಅಲೌಕಿಕ ಮಹಿಮೆಯನ್ನೇ ಅವಳ ಜೀವನ ನಿಷ್ಠೆ ಹಾಗೂ ಲೌಕಿಕ ಪರಾಕಾಷ್ಠೆಗಳ ಪ್ರತಿಮೆಯನ್ನಾಗಿ ಮಾರ್ಪಡಿಸಿಕೊಂಡ ಈ ಮೇರು ಕೃತಿಯ ಪ್ರತಿಭಾದರ್ಶನ ಅದ್ಭುತವಾದದ್ದು".[3] ಹಾಗಾಗಿ ಅಕ್ಕನ ವ್ಯಕ್ತಿತ್ವದ ಘನತೆಯನ್ನು ಹೆಚ್ಚಿಸುವ ಪಾತ್ರವಾಗಿ ಚಂಪೆಯ ಗೆಳೆತನ ಉಲ್ಲೇಖಾರ್ಹವಾದುದ್ದಾಗಿದೆ.

ಭೂಸನೂರಮಠರ ಕಾವ್ಯದ ಮತ್ತೊಂದು ವೈಶಿಷ್ಟ್ಯವೆಂದರೆ ಅಕ್ಕಮಹಾದೇವಿ ಮತ್ತು ಗುರು ಚೆನ್ನಮಲ್ಲರ ಲೋಕಕಲ್ಯಾಣದ ಮುಖಾಮುಖಿ. ಭೂಸನೂರಮಠ ಅವರು ಕಾಲತೀತವಾದ, ದೇಶಾತೀತವಾದ, ಲಿಂಗ ಮತ್ತು ಜಾತ್ಯಾತೀತವಾದ ಮಾನವತ್ವವನ್ನು ದರ್ಶನವಾಗಿ ನಿರೂಪಿಸಲು ಪ್ರಯತ್ನಿಸಿದ ಫಲವಾಗಿಯೇ 'ಭವ್ಯಮಾನವ' ಮಹಾಕಾವ್ಯ ರಚಿಸಲ್ಪಟ್ಟಿದೆ. ವಿಶ್ವಮಾನವತೆಯ ಪ್ರತಿಪಾದನೆಗೆ ಕವಿ ಆಯ್ಕೆಮಾಡಿಕೊಂಡ ಲೋಕಕಲ್ಯಾಣದ ವ್ಯಕ್ತಿತ್ವವೇ ಅಕ್ಕಮಹಾದೇವಿ. ಚಾರಿತ್ರಿಕವಾದ ವ್ಯಕ್ತಿತ್ವಕ್ಕೆ ಸಮಷ್ಟಿಪ್ರಜ್ಞೆಯ ಆಯಾಮವನ್ನು ಒದಗಿಸುವ ಸಲುವಾಗಿಯೇ ಗುರುಚೆನ್ನಮಲ್ಲಯ್ಯ ಮತ್ತು ಗಿರಿಮಲ್ಲ ಪಾತ್ರಗಳನ್ನು ಕವಿ ಸ್ವತಂತ್ರವಾಗಿ ಸೃಷ್ಟಿಸಿದ್ದಾರೆ. ಗುರುಚೆನ್ನಮಲ್ಲಯ್ಯ ಶಿವಶರಣರ ಪ್ರತಿನಿಧಿಯಾಗಿ ವಚನಕಾರರ ನಡೆ–ನುಡಿಯನ್ನು ಸಾಧಿಸಿ ತೋರಿದ ಜ್ಞಾನಿಯಾಗಿ ಕಂಗೊಳಿಸಿದ್ದಾನೆ. ಗೆಳತಿ ಚಂಪೆ ಬಿತ್ತಿದ ಭಕ್ತಿಯ ಮೊಳಕೆಗೆ ನೀರೆರೆಯುವ ಆಧ್ಯಾತ್ಮಿಕ ಗುರುವಾಗಿ ಗುರುಚೆನ್ನಮಲ್ಲರ ಪಾತ್ರ ಸಾಕಾರಗೊಂಡಿದೆ. ಅಕ್ಕನ ಅಲೌಕಿಕ ಒಲವಿಗೆ ಸಮರ್ಥನೀಯವಾದ ನೆಲೆಯನ್ನು ಒದಗಿಸಲೆಂದೆ ಆಗಮಿಸಿದ ಗುರುಚೆನ್ನರ ದರ್ಶನ ಭವ್ಯಮಾನವ ಕಾವ್ಯದ ಹೃದಯಂಗಮ ಚಿತ್ರಣವಾಗಿದೆ. ಅಕ್ಕನ ದೈವೀಪ್ರೇಮವನ್ನು ಅಂಕುರಿಸಿ ಮನದ ಬೆಳಗನ್ನು ನಿಜದ ನೆಲೆಗೆ ಕರೆದೊಯ್ಯುವ ಗುರುಚೆನ್ನರ ಪಾತ್ರ ಕವಿಯ ಸ್ವತಂತ್ರ ಮತ್ತು ಸೃಜನಶೀಲತೆಯ ಪ್ರತೀಕವಾಗಿದೆ. ಮಹಾದೇವಿಯಕ್ಕನ ಆಧ್ಯಾತ್ಮಿಕ ಬದುಕಿನ ಮಹತ್ವದ ಘಟ್ಟದಲ್ಲಿ ಗುರುಚೆನ್ನಮಲ್ಲರ ಒಡನಾಟವು ಕೂಡ ಒಂದಾಗಿದೆ. ಬಾಲ್ಯದಲ್ಲಿ ನಿಶ್ಚಿತವಾಗಿದ್ದ ಭಕ್ತಿ ತಾರುಣ್ಯದಲ್ಲಿ ವಿಕಸನಗೊಳ್ಳುತ್ತಾ ವಿಸ್ತಾರಗೊಳ್ಳಲು ಗುರುವಿನ ಮಾರ್ಗದರ್ಶನ ಬಹುಮುಖ್ಯವಾದದ್ದು.

3. ಭವ್ಯಮಾನವ–ಕಾವ್ಯದರ್ಶನ : ಡಾ. ಗುರುಲಿಂಗ ಕಾಪಸೆ (ಸಂ), ಲೇಖನ–ಬಿ. ಎ. ಸನದಿ, ಪುಟ–83

ಭವ್ಯಮಾನವ ಕಾವ್ಯದಲ್ಲಿ ಬಹುಮುಖ್ಯವಾದ ಅಲೌಕಿಕ ಒಡನಾಟವಾಗಿ ಕಾಣಿಸಿಕೊಳ್ಳುವ ಅಕ್ಕ ಮತ್ತು ಗುರುಚೆನ್ನಮಲ್ಲಯ್ಯನ ಪ್ರಸಂಗ ಅನುಭಾವ ಮತ್ತು ದಾರ್ಶನಿಕತೆಯ ಭಾಗವಾಗಿಯು ಚರ್ಚಿತ ಸಂಗತಿ. ಬಾಲ್ಯದಲ್ಲಿ ಅಕ್ಕನಿಗೆ ದೀಕ್ಷೆ ನೀಡಿದ ಗುರುವು ಶ್ರೀಶೈಲದಲ್ಲಿ ಎದುರಾಗಿ ಲೌಕಿಕ–ಅಲೌಕಿಕತೆ ಜ್ಞಾನವನ್ನು ಅಕ್ಕನೊಂದಿಗೆ ವಿನಿಮಯ ಮಾಡಿಕೊಳ್ಳುತ್ತಾ 'ಮೃತ್ಯುಮೀಮಾಂಸೆ'ಗೆ ತೊಡಗುತ್ತಾರೆ. ಹೆಂಡತಿ ಗಂಗಮ್ಮ ಮತ್ತು ಮಗ ಸಂಗಯ್ಯನನ್ನು ಕಳೆದುಕೊಂಡು ದುಃಖಿತರಾಗಿರುವ ಗುರುಚೆನ್ನಮಲ್ಲಯ್ಯನ ನಡುವೆ ಸಂಭಾಷಿಸುವ ಅಕ್ಕನು ದುಃಖದಿಂದ ತುಂಬಿಹೋಗಿರುವ ಮನುಕುಲದ ವಿನಾಶವನ್ನು ಕುರಿತು ತರ್ಕಿಸುತ್ತಾಳೆ. ಹಗಲು–ರಾತ್ರಿಗಳಂತೆ ಬದುಕು ಮತ್ತು ಸಾವಿನ ನಡುವಿನ ವ್ಯಕ್ತಿನಿಷ್ಠ ನೆಲೆಯನ್ನು ಸಮಷ್ಟಿ ನೆಲೆಗೆ ಕೊಂಡೊಯ್ಯುವ ಅಕ್ಕ ಮತ್ತು ಚೆನ್ನಮಲ್ಲಯ್ಯನ ಭೇಟಿಯು ಮಹಾಕಾವ್ಯದ ಜ್ಞಾನದ ಲೀಲಾವಿಲಾಸವಾಗಿ ಬಿಂಬಿತವಾಗಿದೆ. ಚೆನ್ನಮಲ್ಲಯ್ಯನ ಸಾಂಸಾರಿಕ ಜೀವನವು ಅಕ್ಕನ 'ಶರಣಸತಿ–ಲಿಂಗಪತಿ' ತಾತ್ವಿಕತೆಗೆ ಸಮತೂಕವಾದ ನೆಲೆಯಲ್ಲಿ ಚಿತ್ರಿತವಾಗಿದೆ. ಅಕಾಲಿಕ ಮರಣಕ್ಕೆ ತುತ್ತಾದ ಕುಟುಂಬಸ್ಥರನ್ನು ಅನುಭಾವಿಕ ಗುರುವನ್ನು ತಲ್ಲಣಿಸುವಂತೆ ಮಾಡಿರುವುದು ವಿಪರ್ಯಾಸ. ಆದರೆ ಆಧ್ಯಾತ್ಮದ ಸಮಷ್ಟಿಪ್ರಜ್ಞೆಯನ್ನು ತಲುಪುವ ಹಾದಿ ಲೌಕಿಕತೆಯ 'ಮಾಯೆ'ಗಳನ್ನು ಮೀರುವಂತದ್ದು ಎಂಬ ಸಂದೇಶವನ್ನು ಸಾರುವ ಉದ್ದೇಶದಿಂದಲೇ ಕವಿ ಗುರುಚೆನ್ನಮಲ್ಲಯ್ಯನ ಪಾತ್ರವನ್ನು ಸೃಷ್ಟಿಸಿದ್ದಾರೆ. ಮೃತ್ಯುವಿನ ಕ್ರೂರತ್ವದ ಬಗೆಗೆ ತಾರ್ಕಿಕ ಯೋಚನೆಯನ್ನು ಅಭಿವ್ಯಕ್ತಿಸುವ ಗುರು ಮತ್ತು ಶಿವಯೋಗದಿಂದ ವೈರಾಗ್ಯವನ್ನು ಸಾಧಿಸಿ ವಿಶ್ವಮಾನವತೆಯನ್ನು ಸಾರುವ ಶಿಷ್ಯೆಯ ನಡುವೆ ನಡೆಯುವ ಗಂಭೀರ ಚಿಂತನೆಗಳ ಭಾಗವು ಮಹಾಕಾವ್ಯದ ವೈಚಾರಿಕತೆಯ ಮಹತ್ವವನ್ನು ತೆರೆದಿಡುತ್ತದೆ. ನೀಲಗಿರಿ ತಳವಾರ ಅವರು ಗುರುಶಿಷ್ಯರ ಈ ಅನುಸಂಧಾನವನ್ನು "ವಿಜ್ಞಾನ–ತತ್ವಜ್ಞಾನಗಳನ್ನು ಜೊತೆ ಜೊತೆಯಾಗಿಯೇ ಹೇಳುವ ಭೂಸನೂರಮಠರ ವಿಚಾರಧಾರೆಗೆ ಹೋಲಿಸಿದ್ದಾರೆ".[4]

ಭೂಸನೂರರು ಅಕ್ಕನನ್ನು ಮಹಾಮಾನವತೆಯೆಂದು ನಿರೂಪಿಸುವುದಕ್ಕೆ ಮಾತ್ರ ತಮ್ಮ ಸೃಜನಶೀಲತೆಯನ್ನು ಮಿತಿಗೊಳಿಸದೆ, ಗಿರಿಮಲ್ಲನಂತಹ ಶಿಷ್ಯಕೂಡ ಸಂಕೋಚ, ಸಂಶಯ, ಸಂದೇಹಗಳನ್ನು ಬಗೆಹರಿಸಿಕೊಳ್ಳುತ್ತಾ ಭವ್ಯಮಾನವನಾಗುವ ಬಗೆಯನ್ನು ಸ್ವತಂತ್ರ ಪಾತ್ರವಾಗಿ ಸೃಷ್ಟಿಸಿದ್ದಾರೆ. ಭವ್ಯಮಾನವ ಕೃತಿಯ ವೈಶಿಷ್ಟ್ಯತೆಗಳಲ್ಲಿ ಗಿರಿಮಲ್ಲನೆಂಬ ಮಹಾಸಾಧಕನ ಪಾತ್ರ ಕೂಡ ಒಂದು. ಗುರು ಜ್ಞಾನದಾಸೋಹಿಯಾದರೆ ಶಿಷ್ಯ ಗಿರಿಮಲ್ಲ ಆ ದಾಸೋಹದ ಮೊದಲ ಫಲಾನುಭವಿಯಾಗಿ ಜ್ಞಾನ ಸಾಧನೆಗಾಗಿ ಕಾತರಿಸಿದ್ದಾನೆ. ಗುರು ಚೆನ್ನರು ಬದುಕಿನ ಘೋರ ಕತ್ತಲೆಯನ್ನು ದಾಟುವುದಕ್ಕೆ ಸೂಚಿಸುವ ಪರಿಹಾರೋಪಾಯಗಳನ್ನು ಅನುಸರಿಸುತ್ತಾ ಸಾಗುವ ಅಕ್ಕ ಮತ್ತು ಗಿರಿಮಲ್ಲರು ಗುರುವಿನ ಮೂಲಕ ಅಪರಿಮಿತ ಕತ್ತಲನ್ನು ವಿಪರೀತ ಬೆಳಕನ್ನು ಕಾಣುತ್ತಾರೆ. ಗುರು ಮತ್ತು ಶಿಷ್ಯಂದಿರ ನಡುವಿನ ಆಧ್ಯಾತ್ಮಿಕ ಪಯಣವು ಪ್ರಕೃತಿ ಮತ್ತು ಮಾನವ ನಡುವಿನ ಸಹಸಂಬಂಧದ ವ್ಯಾಖ್ಯಾನವಾಗಿದೆ. ಪ್ರಕೃತಿಯೊಂದಿಗಿನ ನಿಸರ್ಗಸಹಜ ಸಂಬಂಧದೊಂದಿಗೆ ಮನುಷ್ಯತ್ವದ ಸ್ಪಂದನೆಗಳು ಒಡಮೂಡಿ ಹುಟ್ಟುವ ಭವ್ಯಮಾನವತೆಯ ಪ್ರತಿಪಾದನೆಗಾಗಿ ಕವಿ ಅಕ್ಕ, ಗುರುಚನ್ನಮಲ್ಲಯ್ಯ ಮತ್ತು ಗಿರಿಮಲ್ಲನೆಂಬ ಚಾರಿತ್ರಿಕ ವ್ಯಕ್ತಿತ್ವಗಳನ್ನು

4. ಭವ್ಯಮಾನವ–ಕಾವ್ಯದರ್ಶನ : ಡಾ. ಗುರುಲಿಂಗ ಕಾಪಸೆ (ಸಂ), ಪುಟ–24

ಸೃಷ್ಟಿಸಿದ್ದಾರೆ. ಪ್ರಕೃತಿ ಮತ್ತು ಮನುಷ್ಯನ ನಡುವಿನ ಅದ್ವೈತದ ಅನುಭಾವವನ್ನು ಮನಗಾಣಿಸಿರುವ ಭೂಸನೂರರು ಲೌಕಿಕತೆಯಿಂದ ಅಲೌಕಿಕತೆಯೆಡೆಗೆ ಮನುಷ್ಯನು ಸಾಗಲೇಬೇಕಾದ ಪಥವನ್ನು ಅಕ್ಕನ ಮೂಲಕ ಸಾಧಿಸಿ ತೋರಿದ್ದಾರೆ.

ಕೌಶಿಕನೊಂದಿಗಿನ ಸಂಘರ್ಷದ ದುಃಖ ಅಕ್ಕನಿಗಾದರೆ ತನ್ನ ಕೌಟುಂಬಿಕ ಜೀವನದ ವೇದನೆ ಗುರುಚೆನ್ನಮಲ್ಲಯ್ಯನದು. ಈ ಎರಡು ಬಗೆಯ ಲೌಕಿಕವಾದ ಮಾಯೆಗಳಿಗೆ ಪ್ರಕೃತಿಯ ದರ್ಶನದ ಮೂಲಕ ಪರಿಹಾರ ಕಂಡುಕೊಳ್ಳುವ ಅಕ್ಕನ ವಿಚಾರವಂತಿಕೆಯ ಮಾರ್ಗ ಭೂಸನೂರರ ಮಹಾಕಾವ್ಯದ ಕವಿತಾಶಕ್ತಿಗೆ ನಿದರ್ಶನವಾಗಿದೆ. ಕಾಯಕತತ್ವದ ಮೂಲಕ ಸಾಧಕರು ಭವ್ಯಮಾನವರಾದ ಕಥಾನಕಗಳನ್ನು ಅಕ್ಕನಿಗೆ ತಿಳಿಸುವ ಗುರುಚೆನ್ನಮಲ್ಲರು ದೇವರಿಗೆ ದೇವತ್ವವೇ ಬಂಧನವೆಂಬ ಆಧ್ಯಾತ್ಮಿಕ ಜ್ಞಾನವನ್ನು ಮನವರಿಕೆ ಮಾಡಿಕೊಡುತ್ತಾರೆ. ಹಾಗಾಗಿ ಕಾಯಕದಲ್ಲಿಯೇ ದೈವಿಕ ನೆಲೆ ತಲುಪುವ ಶರಣತತ್ವದ ಚಿಂತನೆ ಭವ್ಯಮಾನವ ಕಾವ್ಯದ ಜೀವಾಳವಾಗಿದೆ.

'ಭವ್ಯಮಾನವ' ಮಹಾಕಾವ್ಯವು ಮಾನವಕುಲದ ಉದ್ಧಾರಕ್ಕಾಗಿಯೇ ನಿರ್ಮಿತವಾದ ಫಲಶೃತಿಯಾಗಿದೆ. ಲೋಕಕಲ್ಯಾಣಕ್ಕೆ ತೊಡಗಿಕೊಳ್ಳುವ ಪ್ರತಿಯೊಬ್ಬ ಕಾಯಕ ಜೀವಿಯನ್ನು ಕೂಡ ಭೂಸನೂರರು ಸ್ಮರಿಸಿಕೊಳ್ಳುವ ಮೂಲಕ ಶಿವಶರಣರ ಕಾಯಕತತ್ವದ ತಾತ್ವಿಕತೆಯನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಕಾಯಕದ ಮಹತ್ವವನ್ನು ತಿಳಿಸುವ ಸಲುವಾಗಿಯೇ ಮಾದಾರ ಧೂಳಯ್ಯ, ಕಂಕರಿ ಕಕ್ಕಯ್ಯ, ಮೋಳಿಗೆ ಮಾರಯ್ಯ, ಮೇದರ ವೇಮಯ್ಯನಂತಹ ಅನೇಕ ಕಾಯಕಜೀವಿಗಳ ಪಾತ್ರವನ್ನು ಭವ್ಯಮಾನವತೆಯ ರೂಪಕಗಳಾಗಿ ನಿರ್ಮಿಸಲಾಗಿದೆ. ಪ್ರಕೃತಿಕೂಡ ಒಂದು ಮಹತ್ವದ ಪಾತ್ರವಾಗಿ ಕಾವ್ಯದೊಳಗೆ ಜೀವಿಸಿರುವುದು ಕವಿಯ ಕಾವ್ಯತ್ಮಕ ಕೌಶಲ್ಯಕ್ಕೆ ಸಾಕ್ಷಿಯಾಗಿದೆ. ಭೂಸನೂರರು ಪ್ರಕೃತಿ ಮಾತೆಯ ದರ್ಶನಕ್ಕೆ ಅಕ್ಕನ ವಚನಗಳೇ ಸ್ಫೂರ್ತಿಯಾಗಿರಬಹುದು. ತನ್ನ ವಚನಗಳಲ್ಲಿ ಗಿಡ, ಮರ, ಪಕ್ಷಿ, ಪ್ರಾಣಿಗಳೆಲ್ಲೆಲ್ಲ ಚೆನ್ನಮಲ್ಲಿಕಾರ್ಜುನನನ್ನು ಹುಡುಕುವ, ಕಾಣುವ ಅಕ್ಕನ ಪ್ರಕೃತಿಯೊಂದಿಗಿನ ಸಂವಹನ ಪ್ರಕ್ರಿಯೆಯು ಭೂಸನೂರರನ್ನು ಪ್ರಭಾವಿಸಿದೆ. ಹಾಗಾಗಿಯೇ 'ಭವ್ಯಮಾನವ' ಮಹಾಕಾವ್ಯದ ದಾರ್ಶನಿಕ ಪಾತ್ರವಾಗಿ 'ಪ್ರಕೃತಿಮಾತೆಯ' ದರ್ಶನವಾಗಿದೆ. ಪ್ರಕೃತಿಗೆ ಸಮಾಧಾನ ಹೇಳಿಸುವ ಮೂಲಕ ಅಕ್ಕನ ವ್ಯಕ್ತಿತ್ವದ ಘನತೆಯನ್ನು ಮಹಾಮಾತೆಯ ಎತ್ತರಕ್ಕೆ ನಿಲ್ಲಿಸಲಾಗಿದೆ.

ಭವ್ಯಮಾನವ ಕಾವ್ಯದ ವಿಶ್ವಪ್ರತಿಮೆಗಾಗಿ ಕತ್ತಲೆ ಮತ್ತು ಬೆಳಕು ನಿರೂಪಿತಗೊಂಡಿವೆ. ಇಲ್ಲಿ ಕತ್ತಲೆಯೂ ಮನುಷ್ಯನ ಅಂತರಂಗದ ಅಜ್ಞಾನವನ್ನು ಸಾಂಕೇತಿಸುತ್ತದೆ. ಕಾಳರಾತ್ರಿಯ ಪರಿಕಲ್ಪನೆಯು ಕೂಡ ಅಜ್ಞಾನದ ಮನುಷ್ಯನ ತೊಳಲಾಟಗಳನ್ನು ಪ್ರತಿಮಾತ್ಮೀಕರಿಸುತ್ತದೆ. ಆಧ್ಯಾತ್ಮದ ಪರಿಭಾಷೆಯಲ್ಲಿ ಕಾಳರಾತ್ರಿ, ಬೆಳಗು ಎಂಬ ಹಂತಗಳಿರುವುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಅನುಭಾವಿ ಆಧ್ಯಾತ್ಮವನ್ನು ಅರಿಯುವ ಹಂಬಲದಲ್ಲಿ ಎದುರಿಸುವ ಕಳವಳಗಳನ್ನು 'ಕಾಳರಾತ್ರಿ'ಯ ಹಂತವು ಧ್ವನಿಸುತ್ತದೆ. ಹಾಗಾಗಿ ಭವ್ಯಮಾನವ ಕಾವ್ಯದ ಕಾಳರಾತ್ರಿ ಪ್ರಸಂಗವು 'ಕತ್ತಲೆಯ ಕಾಂಡ'ದಲ್ಲಿ ಅಭಿವ್ಯಕ್ತಗೊಂಡಿದ್ದು ಆಧ್ಯಾತ್ಮಕ್ಕೂ ಮುಂಚಿನ ಮನಸ್ಥಿತಿಯನ್ನು ಇದು ಕಟ್ಟಿಕೊಡುತ್ತದೆ. ಕಾಮ, ಕ್ರೋಧ, ಲೋಭ, ಮದ–ಮತ್ಸರಗಳಲ್ಲಿ ಮುಳುಗೇಳುವ ಮನುಷ್ಯನ ಸ್ವಾರ್ಥತನಗಳ ಅವಧಿಯನ್ನು 'ಕತ್ತಲೆಯ ಕಾಂಡ'ವೆಂದು ಕರೆಯುವ ಭೂಸನೂರರು

ಗುರುಚೆನ್ನಮಲ್ಲಯ್ಯನ ಪಾತ್ರದ ಮೂಲಕ ಜಗದ ಮಾನವರೆಲ್ಲರಿಗೂ ಅರಿವು ಮೂಡಿಸಿ ಬೆಳಗಿನ ಕಡೆಗೆ ಕರೆದೊಯ್ದಿದ್ದಾರೆ. ಇಲ್ಲಿ ಬೆಳಗು ಜ್ಞಾನದ ಸಂಕೇತವಾಗಿದೆ. ಒಂದೊಂದು ಊರಿನ ಒಂದೊಂದು ಕುಟುಂಬಗಳ ಯಶೋಗಾಥೆಯನ್ನು ಹೇಳುವ ಮೂಲಕ 'ಸಾಗರದಷ್ಟು ದುಃಖಕ್ಕೆ ಸಾಸಿವೆಯಷ್ಟು ಸುಖ' ಕಾಣುವ ಮನುಷ್ಯ ಜಗತ್ತಿನ ಅಂಧಕಾರವನ್ನು ಕವಿ ಕಥನಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ. ತಪ್ಪು ಒಪ್ಪುಗಳ ನಡುವೆ ಮನಃಪರಿವರ್ತನೆಯಿಂದ ಮಾನವತ್ವಕ್ಕೆ ಹೊರಳುವ ಪಾತ್ರಗಳ ಮುಖೇನ ಕವಿ ಮಾನವೀಯ ಲೋಕವಂದನ್ನೇ ಸೃಷ್ಟಿಸಿದ್ದಾರೆ. ಮುದ್ದಣ್ಣನ ದೈವಿಕಗುಣ, ಕಳ್ಳರ ಆಕಸ್ಮಿಕ ಮನಃಪರಿವರ್ತನೆ, ಸೌಂದರ್ಯ ಚಂದ್ರಿಕೆಯ ಮದುವೆ ಪ್ರಸಂಗದಂತಹ ಅನೇಕ ಘಟನೆಗಳು ಮನುಷ್ಯನ ಮಿತಿ ಮತ್ತು ದುರ್ಗತಿಗಳ ಪರಮಾವಧಿಯನ್ನು ತೆರೆದಿಡುತ್ತವೆ. ಇವುಗಳನ್ನು ಜ್ಞಾನದ ಮೂಲಕ ಮೀರುವ ಬಗೆಯನ್ನು ಭೂಸನೂರರು ಕೃತಿಯುದ್ದಕ್ಕೂ ಸಾದರಪಡಿಸಿದ್ದಾರೆ. ಮಾನವನೇ ಕಾವ್ಯದ ಮಹಾನಾಯಕ, ಮಾನವೀಯತೆಯೇ ಕಾವ್ಯದ ಜೀವಾಳವೆಂಬಂತೆ ಈ ಮಹಾಕಾವ್ಯವು ರಚಿಸಲ್ಪಟ್ಟಿದೆ. ಭೂಸನೂರರು ಮಾನವನ ಭೂತ, ವರ್ತಮಾನ ಮತ್ತು ಭವಿಷ್ಯತ್ತಿನ ಲೋಕಗ್ರಹಿಕೆಗಳನ್ನು ಅಕ್ಕಮಹಾದೇವಿಯ ಜೀವನ ದರ್ಶನದ ಮೂಲಕ ಸಂದೇಶದ ರೂಪದಲ್ಲಿ ಪ್ರಕಟಿಸಿದ್ದಾರೆ. ಧರ್ಮ, ಭಕ್ತಿ, ಜ್ಞಾನ, ವೈರಾಗ್ಯಗಳ ಸಾಧಿಸಿಯೂ ಲೌಕಿಕತೆಯ ನರಕದಲ್ಲಿ ನರಳಾಡುವ ಸ್ವಾರ್ಥದ ಪ್ರಾಪಂಚಿಕವನ್ನು ಜ್ಞಾನದ ಬೆಳಕಿನೆಡೆಗೆ ಕರೆದುತರುವ ಸಾಧಕಿಯಾಗಿ ಅಕ್ಕ ನಿರೂಪಿತಗೊಂಡಿದ್ದಾಳೆ. ಮನುಷ್ಯ ಯುಗದ ದುಃಖಕ್ಕೆ ಕಾರಣವಾಗಿರುವ ಅಜ್ಞಾನಗಳನ್ನು ಶೋಧಿಸುವುದೇ 'ಭವ್ಯಮಾನವ' ಕಾವ್ಯದ ಮಹೋದ್ದೇಶವಾಗಿದೆ. ಗಿರಿಮಲ್ಲನು ಸಾಮಾನ್ಯ ಮನುಷ್ಯನ ಪ್ರತಿನಿಧಿಯಾಗಿ ವ್ಯಕ್ತಪಡಿಸುವ ಎಲ್ಲಾ ಸಂದೇಹಗಳಿಗೆ ಮಾನವರ ಮಧ್ಯದಿಂದಲೇ ಉತ್ತರ ಹುಡುಕಿ ಕೊಡುವ ಮಹಾದೇವಿಯಕ್ಕನ ಪಾತ್ರವೂ ಚಾರಿತ್ರಿಕ ವ್ಯಕ್ತಿತ್ವದ ಮಿತಿಯನ್ನು ಮೀರಿ ಸಮಕಾಲೀನ ಜಗತ್ತಿನ ಏಳ್ಗೆಗೆ ಮಾರ್ಗದರ್ಶಿಯಾಗಿರುವುದು ವಿಶೇಷವೆನಿಸುತ್ತದೆ.

ಕಾವ್ಯದ ಕಥಾನಾಯಕಿಯಾಗಿ ಕಾವ್ಯದಕ್ಕೂ ಕಾಣಿಸಿಕೊಳ್ಳುವ ಅಕ್ಕನು ಪ್ರಧಾನ ಪಾತ್ರವಾಗಿ ಚಿತ್ರಿತವಾಗಿದ್ದರೂ, ಕಾವ್ಯದೊಳಗೆ ಬಹುಮಾನವ ಬಳಗವೇ ದಿಗ್ದರ್ಶನಗೊಳ್ಳುತ್ತಾ ಮನುಷ್ಯನೇ ಕಾವ್ಯದ ನಾಯಕನಾಗುವ ವಿಕಾಸದ ತತ್ವ 'ಭವ್ಯಮಾನವ'ದ ದರ್ಶನವಾಗಿದೆ. ಲೌಕಿಕ ಬದುಕಿನ ಕಾಯಕವೂ ಕೂಡ ಅಲೌಕಿಕ ದರ್ಶನವನ್ನು ನೀಡಬಲ್ಲದೆಂಬ ಅರಿವನ್ನು ಭೂಸನೂರರು ತಿಳಿಯಪಡಿಸಿದ್ದಾರೆ. ಮಾನವ ಪ್ರಪಂಚದ ಮೌಲ್ಯ–ಅಪಮೌಲ್ಯಗಳನ್ನು ತುಲನೆ ಮಾಡುವ ಹಕ್ಕನ್ನು 'ಅಕ್ಕಮಹಾದೇವಿ'ಗೆ ನೀಡಿರುವುದು ಅಭಿನಂದನಾರ್ಹ. ಕವಿಗೆ ಅಕ್ಕನ ಮೂಲಕ ಮಾನವಕುಲದ ಮೌಲ್ಯಗಳ ಪರಿಶೋಧನೆಗೆ ತೊಡಗುವ ಅಭಿಲಾಷೆಯಿದೆ. ಜೊತೆಗೆ 12ನೇ ಶತಮಾನದ ಶರಣರ ತಾತ್ವಿಕ ನಿಲುವುಗಳನ್ನು ಆಧುನಿಕ ಸಮಾಜಕ್ಕೆ ಮರುನಿರ್ವಚಿಸುವ ಸಮರ್ಥ ಮಾರ್ಗವಾಗಿ ಅಕ್ಕನ ವ್ಯಕ್ತಿತ್ವ ಅನಾವರಣಗೊಂಡಿದೆ. ಜಗದ ಸಕಲ ಮಾನವಕುಲವನ್ನೇ ಕೈಹಿಡಿದು ನಡೆಸುವ ಆಧ್ಯಾತ್ಮಿಕ ಸಾಧಕಳಾಗಿ ಅಕ್ಕ ಗೋಚರವಾಗುತ್ತಾಳೆ. ಆಧ್ಯಾತ್ಮಿಕ ಪರಿಭಾಷೆಯಲ್ಲಿ ಅನುಭಾವದ ಹಂತಗಳನ್ನು ಗುರುತಿಸಲಾಗಿದೆ. ಇದಕ್ಕೆ ಅನುಸಾರವಾಗಿ ವೇದಾಂತಗಳ ಪ್ರಕಾರ ಪಂಚಕೋಶಗಳ ಮೂಲಕ ಮನುಷ್ಯ ಅಧ್ಯಾತ್ಮದ ಮೇಲ್‌ಸ್ತರವನ್ನು ತಲುಪುತ್ತಾನೆಂದು ಧರ್ಮಶಾಸ್ತ್ರಗಳಲ್ಲಿ ವಿವರಣೆಗಳಿವೆ. ಹಾಗಾಗಿಯೇ ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಕೃತಿಯು

ಸಾಧಿಸುವ ಪಂಚಕೋಶಗಳ ಯಾನವನ್ನು ಭೂಸನೂರರ ಭವ್ಯಮಾನವ ಮಹಾಕಾವ್ಯವು ಕೂಡ ಅನ್ನಮಯ ಕೋಶದಿಂದ ಆನಂದಮಯ ಕೋಶಕ್ಕೆ ಯಾತ್ರೆಗೈಯ್ಯುವ ಪ್ರಕ್ರಿಯೆಯನ್ನು ಕಾಣಬಹುದಾಗಿದೆ. ಈ ಯಾತ್ರೆಯ ಸಾರಥಿಯಾಗಿ ಅಕ್ಕನು ನೇತೃತ್ವವಹಿಸಿರುವುದರಿಂದ ಭವ್ಯಮಾನವ ತತ್ವಕ್ಕೆ ಸ್ತ್ರೀಸಂವೇದನೆಯ ಸ್ವರೂಪ ಆವರಿಸಿದಂತಾಗಿದೆ. ಕೌಶಿಕ ಮತ್ತು ಅಕ್ಕನ ನಡುವಿನ ಸಂಘರ್ಷದ ಬಗೆಗೆ ಹರಿಹರಾದಿಯಾಗಿ ಅನೇಕ ಕವಿಗಳು ತಳೆದಿರುವ ನಿಲುವುಗಳಿಗೆ ಭಿನ್ನವಾಗಿ ಭೂಸನೂರರು ತಾತ್ವೀಕರಿಸಿದ್ದಾರೆ. ಚಂಪೆಯ ಮೂಲಕ ಒಲವಿನ ಭಕ್ತಿಗೆ ಎದೆ ತೆರೆದುಕೊಳ್ಳುವ ಅಕ್ಕ, ಗುರುಚೆನ್ನ ಮಲ್ಲಯ್ಯನವರ ಮೂಲಕ ಅನುಭಾವದೆಡೆಗೆ ಮುಖ ಮಾಡಿ, ವಚನಕಾರರೆದುರು ಹೆಣ್ಣಿನ ಆಧ್ಯಾತ್ಮಿಕ ತಿಳಿವನ್ನು ಸಾಬೀತುಪಡಿಸುತ್ತಾಳೆ. ಕಲ್ಯಾಣಕಾಂಡದಿಂದ ಭವ್ಯಕಾಂಡದವರೆಗಿನ ಜೀವನಯಾನದಲ್ಲಿ ಲೌಕಿಕತೆಯಿಂದ ಅಲೌಕಿಕತೆಯೆಡೆಗೆ ಸಮಸ್ತ ಲೋಕವನ್ನು ಕರೆದೊಯ್ಯುವ ಅಕ್ಕಮಹಾದೇವಿಯು ಪರ್ಯಾಯವಾದ ವಿಶ್ವಮಾನವ ಪ್ರಪಂಚವನ್ನೇ ಸೃಷ್ಠಿಸಿರುವುದು ಭವ್ಯಮಾನವದ ಹೆಗ್ಗಳಿಕೆ. ಮಹಾಕಾವ್ಯ ಪರಂಪರೆಯ ದಾರ್ಶನಿಕ ನೆಲೆಗಳನ್ನು ಭೂಸನೂರರು ಮುಂದುವರಿಸಿದಂತೆ ಕಂಡರೂ ವೈವಾಹಿಕ ಜೀವನದ ತೊಡಕುಗಳಾಚೆಗೆ ನಿಂತು ಆಧ್ಯಾತ್ಮದಂತಹ ಪರಮಸಿದ್ಧಿಯ ಜ್ಞಾನವನ್ನು ಸ್ಥಾಪಿಸಿಕೊಳ್ಳುವ ಅಕ್ಕನ ವ್ಯಕ್ತಿತ್ವಕ್ಕೆ ಮೆರುಗು ತಂದಿರುವುದು ವಿಶೇಷ. ಮನುಷ್ಯ ಜಗತ್ತನ್ನು ಮಾನವ ತತ್ವದೆಡೆಗೆ ಮುನ್ನಡೆಸುವ ಅಂಬಿಗಳಾಗಿ ಅಕ್ಕನ ಹೊಣೆಗಾರಿಕೆ ಮೆಚ್ಚುವಂತದ್ದು. ಅಕ್ಕನನ್ನು ಮಹಾಕಾವ್ಯದ ಕೇಂದ್ರ ಪಾತ್ರವಾಗಿಸಿ ಹೆಣ್ತನವನ್ನು ಮಾತೃಮಮತೆಗೆ ಸೀಮಿತವಾಗಿಸದೆ, ಕುಟುಂಬದಾಚೆಗಿನ ಜ್ಞಾನದ ಶಾಖೆಗಳಿಗೆ ನಾಯಕಿಯಾಗಿಸಿರುವ ಭೂಸನೂರರ ಕಾವ್ಯದೃಷ್ಟಿ ಶ್ಲಾಘನೀಯ.

**ಪರಾಮರ್ಶನ ಗ್ರಂಥಗಳು**


- ಭೂಸನೂರಮಠ, ಸಂ.ಶಿ. (1986). ಭವ್ಯ ಮಾನವ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ.
- ಗುರುಲಿಂಗ ಕಾಮಸೆ., ಎಸ್.ಜಿ.ಫಿವಾರಿ, ಪ್ರಾ. ಅಣ್ಣಪ್ಪ ಮಟ್ಟೀಕಲ್ಲಿ (ಸಂ.) (1990). ಭವ್ಯಮಾನವ–ಕಾವ್ಯದರ್ಶನ, ಡಾ. ಶ್ರೀ ಶಿವಬಸವ ಸ್ವಾಮಿಗಳು, ನಾಗನೂರು, ಬೆಳಗಾವಿ.
- ಕಮಲಾ ಇಂದೂಧರ ಸಿನ್ನೂರ್ : ಹೊಸಗನ್ನಡ ಸಾಹಿತ್ಯದಲ್ಲಿ ಅಕ್ಕಮಹಾದೇವಿ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.